

**ಕೃಷ್ಣ ಮಾಸಡಿ**

“ಯಾರ್ರೀ ರಾಜ, ರಾಣಿ, ಹುಲಿ, ಆನೆ—ಕುದುರೆ—ಕರಡಿ... ಬೇಗ ಬೇಗ ಹಾಕಿ... ಬೇಗ ಬೇಗ ಬಾಚಿಕೊಳ್ಳಿ...” ಎಂದು ಹಳದಣ್ಣ ಎದುರಿಗೆ ಹಾಸಿದ ಬಟ್ಟೆಯ ಮೇಲೆ ಬಿಡಿಸಿದ ಬಣ್ಣ ಬಣ್ಣದ ಚಿತ್ರಗಳ ಮನೆಯ ಮೇಲೆ ಬೀಳುವ ದುಡ್ಡನ್ನು ನೋಡುತ್ತಾ ಕೂಗುತ್ತಾನೆ. ಚೌಕಾಕಾರದಲ್ಲಿ ಒಂದು ಎರಡೆಂದು ಬರೆದು ರಾಜ ರಾಣಿ ಮುಂತಾಗಿ ಬಿಡಿಸಿದ ಚಿತ್ರಗಳ ತರಹವೇ ಬಿಡಿಸಿರುವ ತಿರುಗು ಮಣೆಯನ್ನು ತಿರುಗಿಸುತ್ತಿದ್ದ. ಒಂದೊಂದು ಮನೆಗೂ ಒಂದೊಂದು ಮೊಳೆ ಬಡಿದಿದ್ದು ಒಂದು ಕಡೆ ನಿಂತಿರುವ ರಬ್ಬರ್ ಕಡ್ಡಿಯನ್ನು ಸೇರಿಸಿ ಟರ್ರ್ ಎಂದು ತಿರುಗಿ ಒಂದು ಕಡೆ ನಿಲ್ಲುತ್ತಿತ್ತು. ನಿಂತ ಚಿತ್ರದಲ್ಲಿ ಕಂಡಂತೆ ಕೆಳಗೆ ಹಾಸಿದ ಬಟ್ಟೆಯ ಮೇಲಿನ ಇರುವ ದುಡ್ಡಿಗೆ ನಾಲ್ಕರಷ್ಟು ಹಣ ಕೊಟ್ಟು ಉಳಿದ ಚಿತ್ರಗಳ ಮೇಲಿನ ದುಡ್ಡನ್ನು ಬಾಚಿಕೊಳ್ಳುತ್ತಿದ್ದ. ಹೊನ್ನಾಳಿ ಸಮೀಪದ ರಾಂಪುರದ ದನಗಳ ಜಾತ್ರೆಯಲ್ಲಿ ನಡೆಯುತ್ತಿದ್ದ 60ರ ದಶಕದ ಒಂದು ಘಟನೆ. ಟೆಂಟ್ ಸಿನಿಮಾಗಳು, ನಾಟಕಗಳು ರಾತ್ರಿಯೆಲ್ಲಾ ನಡೆಯುತ್ತಿದ್ದರೆ ಹಗಲಿನಲ್ಲಿ ಹಳದಣ್ಣನ ತರಹದವರು ವಿವಿಧ ರೀತಿಯ ಜೂಜುಗಳನ್ನು ನಡೆಸುತ್ತಿದ್ದರು.

ಜೂಜಿನ ಮೋಜಿಗೆ ಬಿದ್ದು ಇರುವ ಎರಡೆಕೆರೆ ಹೊಲ ಕಳೆದುಕೊಳ್ಳುವ ಸ್ಥಿತಿ ತಲುಪಿದಾಗ ತಾನೇ ಈ ಜೂಜಿನ ಒಡೆಯನಾಗಿ ಗಿರಗಟ್ಲೆ ಪಡೆದಿದ್ದ. ಹೀಗೆ ಒಮ್ಮೆ ಜೂಜಿನಲ್ಲಿ ಮುಳುಗಿರುವಾಗ ಪೊಲೀಸರು ಹಳದಣ್ಣನನ್ನು ಹೊನ್ನಾಳಿಯ ಸ್ಟೇಷನ್‌ಗೆ ಎಳೆದುಕೊಂಡು ಹೋಗಿ ಕೋಣೆಯ ಕತ್ತಲಲ್ಲಿ ಬೆತ್ತಲೆ ಕೂರಿಸಿ ಮನಸೋಯಿಚ್ಛೆ ಹೊಡೆಯಲಾರಂಭಿಸಿದ್ದರು. ಹಾಗೆಂದು ಅವನು ಪೊಲೀಸರ ಕೈ ಬೆಚ್ಚಗೆ ಮಾಡುತ್ತಿರಲಿಲ್ಲವೆಂದಲ್ಲ... ಆದರೆ ಅಂದು ಇನ್‌ಸ್ಪೆಕ್ಟರ್ ಮಗ ಅಪ್ಪ ಅಮ್ಮನ ಒಡವೆ—ದುಡ್ಡು ಕದ್ದು ಜೂಜಾಡಿ ಕಳೆದಿದ್ದ. ಹಾಗಾಗಿ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಎಲ್ಲಾ ಜೂಜಿನವರಿಗೆ ಈ ಸ್ಥಿತಿ ಬಂದಿತ್ತು. ಹಾಗೆ ನೋಡಿದರೆ ಮಗ ಕಳೆದುಕೊಂಡ ಇಸ್ಪೀಟು ಮನೆ ಮಾತ್ರ ಸುಗಮವಾಗಿ ನಡೆಯುತ್ತಿತ್ತು. ಕಾಣದ ಕತ್ತಲಲ್ಲಿ ಯಾರು ಎಲ್ಲಿಗೆ ಹೊಡೆಯುತ್ತಿದ್ದಾರೆಂದು ತಿಳಿಯದಂತೆ ಬೆತ್ತಲೆ ಮೈಗೆ ಹೊಡೆಯುತ್ತಿದ್ದಾಗ ಕಣ್ಣಿಗೆ ಏನೂ ಕಾಣದ ಶೂನ್ಯ ಆವರಿಸಿ ದೇಹ ನಿಶ್ಚಲವಾಗಿ ಉಸಿರಿನ